ಕರ್ನಾಟಕ ವಿಧಾನ ಪರಿಷತ್ತು

1)	**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ**	: 2039
2)	**ಸದಸ್ಯರ ಹೆಸರು**	: ಶ್ರೀ ಕೆ.ಎ.ತಿಪ್ಪೇಸ್ವಾಮಿ (ನಾಮನಿರ್ದೇಶನ ಹೊಂದಿದವರು)
3)	**ಉತ್ತರಿಸಬೇಕಾದ ದಿನಾಂಕ**	: 24-03--2021
4)	**ಉತ್ತರಿಸಬೇಕಾದ ಸಚಿವರು**	: ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಸಮುದ್ರದಿಂದ ಮತ್ತು ಒಳನಾಡು ನೀರಿನಿಂದ ಉತ್ಪಾದನೆಯಾಗಿರುವ ಮೀನಿನ ಪ್ರಮಾಣವೆಷ್ಟು;	ಕಳೆದ ಮೂರು ವರ್ಷಗಳಲ್ಲಿ ಸಮುದ್ರದಿಂದ ಮತ್ತು ಒಳನಾಡು ನೀರಿನಿಂದ ಉತ್ಪಾದನೆಯಾಗಿರುವ ಮೀನಿನ ಪ್ರಮಾಣದ ವಿವರಗಳು ಕೆಳಕಂಡಂತಿವೆ:- (ಮೀನು ಉತ್ಪಾದನೆ ಮೆಟ್ರಿಕ್ ಟನ್ ಗಳಲ್ಲಿ) | | 2017-18 | 2018-19 | 2019-20 | | ಕರಾವಳಿ | 414348 | 389491 | 403368 | | ಒಳನಾಡು | 188174 | 197921 | 228633 |
ಆ)	ರಾಜ್ಯ ಸರ್ಕಾರ, ಕೇಂದ್ರ ಮತ್ತು ರಾಜ್ಯ ಸರ್ಕಾರದ ಯಾವ ಯಾವ ಯೋಜನೆಗಳ ಅಡಿಯಲ್ಲಿ ಮತ್ಸ್ಯ ಅಭಿವೃದ್ಧಿಗೆ ಕಾರ್ಯಕ್ರಮಗಳನ್ನು ರೂಪಿಸಿದೆ; ಈ ಕಾರ್ಯಕ್ರಮಗಳಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ತೊಡಗಿಸಿರುವ ಅನುದಾನವೆಷ್ಟು; ಭೌತಿಕ-ಆರ್ಥಿಕ ಗುರಿಗಳೆಷ್ಟು; (ಸಂಪೂರ್ಣ ವಿವರ ನೀಡುವುದು)	ರಾಜ್ಯದಲ್ಲಿ ಮೀನುಗಾರಿಕೆ ಇಲಾಖೆಯಡಿಲ್ಲಿರುವ ಯೋಜನೆಗಳ ವಿವರಗಳನ್ನು **ಅನುಬಂಧ-1** ರಲ್ಲಿ ಹಾಗೂ ಆರ್ಥಿಕ ಮತ್ತು ಭೌತಿಕ ಗುರಿಗಳ ವಿವರಗಳನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ.
ಇ)	ರಾಜ್ಯದಲ್ಲಿ ಕೇಂದ್ರ ಸರ್ಕಾರದ ಯೋಜನೆ ಅಡಿ ಇದುವರೆಗೂ ಸ್ಥಾಪಿಸಲಾಗಿರುವ ಮೀನು ಕೃಷಿಕ ಅಭಿವೃದ್ಧಿ ಸಂಸ್ಥೆಗಳು ಮತ್ತು ಉಪ್ಪು ನೀರು ಮೀನು ಕೃಷಿಕ ಅಭಿವೃದ್ಧಿ ಸಂಸ್ಥೆಗಳು ಎಷ್ಟು; ಮತ್ತು ಈ ಸಂಸ್ಥೆಗಳಿಗೆ ಯಾವ ರೀತಿ ಆರ್ಥಿಕ ನೆರವು ನೀಡಲಾಗಿದೆ? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)	ಕಳೆದ 9 ವರ್ಷಗಳಿಂದ ಮೀನು ಕೃಷಿಕ ಅಭಿವೃದ್ಧಿ ಸಂಸ್ಥೆಗಳು ಮತ್ತು ಉಪ್ಪು ನೀರು ಮೀನು ಕೃಷಿಕ ಅಭಿವೃದ್ಧಿ ಸಂಸ್ಥೆಗಳು ಕಾರ್ಯನಿರ್ವಹಿಸುತ್ತಿರುವುದಿಲ್ಲ. ಇವುಗಳಲ್ಲಿನ ಎಲ್ಲಾ ಹುದ್ದೆಗಳನ್ನು ಅವಶ್ಯವಿರುವ ಕಛೇರಿಗಳಿಗೆ ಸ್ಥಳಾಂತರಿಸಲಾಗಿದೆ.

ಸಂಖ್ಯೆ: ಪಸಂಮೀ ಇ-121 ಮೀಇಯೋ 2021

(ಎಸ್ ಅಂಗಾರ)
ಮೀನುಗಾರಿಕೆ, ಬಂದರು
ಮತ್ತು ಒಳನಾಡು ಜಲಸಾರಿಗೆ ಸಚಿವರು

ಅನುಬಂಧ–1

ರಾಜ್ಯದಲ್ಲಿ ಮೀನುಗಾರಿಕೆ ಇಲಾಖೆಯಡಿಯಲ್ಲಿರುವ ಯೋಜನೆಗಳ ವಿವರ

- **ಮೀನುಗಾರಿಕೆ ದೋಣಿಗಳಿಗೆ ಡೀಸಲ್** – ಮಾರಾಟ ತೆರಿಗೆ ಮರುಪಾವತಿ ಯೋಜನೆಯಡಿ ಯಾಂತ್ರೀಕೃತ ಮೀನುಗಾರಿಕೆ ದೋಣಿಗಳು ಬಳಸುವ ಡೀಸಲ್ ರಾಜ್ಯ ಮಾರಾಟ ಕರಕ್ಕೆ ಸಮನಾದ ಮೊತ್ತವನ್ನು ದೋಣಿಗಳ ಮಾಲೀಕರ ಬ್ಯಾಂಕ್ ಖಾತೆಗೆ ನೇರವಾಗಿ ಬಿಡುಗಡೆ ಮಾಡಲಾಗುತ್ತಿದೆ.
- **ಸಾಂಪ್ರದಾಯಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು ಯೋಜನೆ:**– ಪಡಿತರ ದರದಲ್ಲಿ 300 ಲೀಟರ್ ಸೀಮೆ ಎಣ್ಣೆಯನ್ನು ಸರಬರಾಜು ಮಾಡಲು ಅವಕಾಶ ಕಲ್ಪಿಸಲಾಗಿದೆ.
- **ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುಚ್ಛಕ್ತಿಗೆ ಸಹಾಯಧನ ಯೋಜನೆ:**– ಮಂಜುಗಡ್ಡೆ ಘಟಕಗಳು ಉಪಯೋಗಿಸಿದ ವಿದ್ಯುತ್ ಮೇಲೆ ಪ್ರತಿ ಯೂನಿಟ್‌ಗೆ ರೂ.1.75 ರಂತೆ ಸಹಾಯಧನ ನೀಡಲು ಅವಕಾಶ ಕಲ್ಪಿಸಲಾಗಿದೆ.
- ಕೆರೆಗಳಲ್ಲಿ ಮೀನು ಉತ್ಪಾದನೆಯನ್ನು ಹೆಚ್ಚಿಸಲು ಹಾಗೂ ಮೀನು ಕೃಷಿಗೆ ಉತ್ತೇಜನ ನೀಡಲು, ಪ್ರತಿ ಹೆಕ್ಟೇರ್‌ಗೆ 4,000 ಬಲಿತ ಮೀನು ಮರಿಗಳನ್ನು ಹಾಗೂ 2 ಟನ್ ಕೃತಕ ಆಹಾರವನ್ನು ಗರಿಷ್ಠ 27,000 ರೂ.ಗಳನ್ನು ಸಹಾಯಧನವಾಗಿ "ಮತ್ಸ್ಯ ಕೃಷಿ ಆಶಾ ಕಿರಣ" ಯೋಜನೆಯಡಿ ನೀಡಲಾಗುತ್ತಿದೆ.
- **"ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ"** ಯೋಜನೆಯಡಿ ರಾಜ್ಯದ ಜಲ ಪ್ರದೇಶದಲ್ಲಿ ಪ್ರತಿ ಹೆಕ್ಟೇರ್ ಉಪಯುಕ್ತತಾ ಜಲವಿಸ್ತೀರ್ಣಕ್ಕೆ 2000 ಬಲಿತ ಬಿತ್ತನೆ ಮೀನುಮರಿಗಳನ್ನು ಮೀನುಗಾರರ ಸಹಕಾರ ಸಂಘಗಳ ಬಲಪಡಿಸುವ ಉದ್ದೇಶದಿಂದ ಸಂಘಗಳ ಮುಖಾಂತರ ಉಚಿತವಾಗಿ ಬಿತ್ತನೆ ಮಾಡಿ ಒಳನಾಡು ಮೀನು ಉತ್ಪಾದನೆಯನ್ನು ಹೆಚ್ಚಿಸಲಾಗುತ್ತಿದೆ.
- 2019–20ನೇ ಸಾಲಿನಲ್ಲಿ ಹೊಸ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದ್ದು ರಾಜ್ಯದಲ್ಲಿ ಲಭ್ಯವಿರುವ ಒಳನಾಡು ಹಾಗೂ ಹಿನ್ನೀರು ಜಲಸಂಪನ್ಮೂಲಗಳಲ್ಲಿ ಸಿಗಡಿ ಮತ್ತು ಮೀನು ಕೃಷಿಯನ್ನು ಪ್ರತಿ ಹೆಕ್ಟೇರ್ ವಿಸ್ತೀರ್ಣಕ್ಕೆ ರೂ.50,000/– ಸಹಾಯಧನ ನೀಡಲಾಗುತ್ತಿದೆ.
- ಮೀನು ಮರಿ ಖರೀದಿಸಲು ನೆರವು ಯೋಜನೆಯಡಿ ಮೀನುಗಾರರಿಗೆ ಮೀನುಮರಿ ಖರೀದಿಗೆ ಶೇ.50 ಸಹಾಯಧನ ಒದಗಿಸಲಾಗುತ್ತಿದೆ.
- **ಜಲಾಶಯಗಳಲ್ಲಿ ಮೀನು ಮರಿ ಬಿತ್ತನೆ** ಯೋಜನೆಯಡಿ ಬೆರಳುದ್ದದ ಮೀನು ಮರಿ ಬಿತ್ತನೆ ಮಾಡುವ ಮೂಲಕ ಮೀನುಗಾರರ ಅಭಿವೃದ್ಧಿ ಕೈಗೊಳ್ಳಲಾಗುತ್ತಿದೆ.

- ಒಳನಾಡು ಮೀನುಗಾರರಿಗೆ ಮೀನು ಹಿಡಿಯಲು ಸಲಕರಣೆ ಕಿಟ್ ವಿತರಣೆ ಯೋಜನೆಯಡಿ ರೂ. 10000/-ವೆಚ್ಚದಲ್ಲಿ ಫೈಬರ್‌ಗ್ಲಾಸ್ ಹರಿಗೋಲು ಅಥವಾ ಮೀನು ಹಿಡಿಯಲು ಸಲಕರಣೆ ಕಿಟ್ ಖರೀದಿಸಲು ಶೇ.100 ರಷ್ಟು ಸಹಾಯಧನ ನೀಡಲಾಗುತ್ತಿದೆ.
- "ಮತ್ಸ್ಯವಾಹಿನಿ" ಯೋಜನೆ ಅಡಿಯಲ್ಲಿ ಮೀನು ಸಾಗಾಣಿಕೆಗಾಗಿ ಮೀನುಗಾರರಿಗೆ ತ್ರಿಚಕ್ರ ಟೆಂಪೋ ರಿಕ್ಷಾವನ್ನು ಖರೀದಿಸಲು ಆರ್ಥಿಕ ನೆರವು ನೀಡಲಾಗುತ್ತಿದೆ.
- ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ: ಈ ಯೋಜನೆಯು ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾಗಿದ್ದು, ಮೀನುಗಾರಿಕೆ ಮೌಲ್ಯ ಸರಪಳಿಯಲ್ಲಿ ಮೀನು ಉತ್ಪಾದನೆಯಿಂದ ಮೀನಿನ ಬಳಕೆಯವರೆಗೆ ವೈವಿಧ್ಯಮಯ ಸೌಲಭ್ಯಗಳನ್ನು ಒದಗಿಸಲು ರೂಪಿಸಲಾಗಿರುವ ಯೋಜನೆಯಾಗಿದೆ. ಕೇಂದ್ರ ಸರ್ಕಾರವು ರಾಜ್ಯಕ್ಕೆ ಒಟ್ಟು ರೂ.137.20 ಕೋಟಿ ಯೋಜನಾ ವೆಚ್ಚದ ಯೋಜನೆಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಿರುತ್ತದೆ. ಇದರಲ್ಲಿ ಕೇಂದ್ರ ಸರ್ಕಾರದ ಸಹಾಯಧನದ ಪಾಲು ರೂ.42.04 ಕೋಟಿ ಮತ್ತು ರಾಜ್ಯದ ಸಹಾಯಧನದ ಮೊತ್ತ ರೂ.29.22 ಕೋಟಿಗಳಷ್ಟಾಗಿರುತ್ತದೆ.

ಅನುಬಂಧ-2

ಭೌತಿಕ-ಆರ್ಥಿಕ ಗುರಿಗಳು

ಫೆಬ್ರವರಿ 2021ರ ಅಂತ್ಯದವರೆಗೆ

ಯೋಜನೆಯ ಹೆಸರು	ಆರ್ಥಿಕ ಗುರಿ (ರೂ. ಲಕ್ಷಗಳಲ್ಲಿ)		ಭೌತಿಕ ಗುರಿ
	ರಾಜ್ಯದ ಪಾಲು	ಕೇಂದ್ರದ ಪಾಲು	
ರಾಜ್ಯ ವಲಯ			
ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸಹಾಯ	500.00	0	619 ಫಲಾನುಭವಿಗಳು
ಜಲಾಶಯಗಳಲ್ಲಿ ಮೀನುಮರಿ ಬಿತ್ತನೆ	150.00	0	37 ಜಲಾಶಯಗಳು
ಪ್ರಧಾನಮಂತ್ರಿ ಮತ್ಸ್ಯ ಸಂಪದ ಯೋಜನೆ ಸಹಾಯಧನ (PMMSY) -ಕೇ.ಪು.ಯೋ.	2922.00	4204.00	26059 ಫಲಾನುಭವಿಗಳು
ಸಾಂಪ್ರದಾಯಿಕ ದೋಣಿಗಳಿಗೆ ಸೀಮೆಎಣ್ಣೆ ಸರಬರಾಜು	640.00	0	4514 ದೋಣಿಗಳು
ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ ಮಾರಾಟ ತೆರಿಗೆ ಮರುಪಾವತಿ	10000.00	0	2884 ದೋಣಿಗಳು
ಮೀನುಗಾರಿಕೆ ಸಲಕರಣೆ ಕಿಟ್ಟುಗಳ ಸರಬರಾಜು	200.00	0	2000 ಫಲಾನುಭವಿಗಳು
ಮಂಜುಗಡ್ಡೆ ಸ್ಥಾವರಗಳು ಬಳಸುವ ವಿದ್ಯುತ್ ಮೇಲೆ ಸಹಾಯಧನ	400.00	0	182 ಮಂಜುಗಡ್ಡೆ ಸ್ಥಾವರಗಳು
ಜಿಲ್ಲಾ ವಲಯ			
ಒಳನಾಡು ಮೀನುಗಾರಿಕೆ ಅಭಿವೃದ್ಧಿಗೆ ಸಹಾಯ	676.05	0	757 ಫಲಾನುಭವಿಗಳು
ಮೀನು ಮಾರುಕಟ್ಟೆಗಳ ಪುನರ್ ನಿರ್ಮಾಣ ಮತ್ತು ಮೀನು ಮಾರಾಟಕ್ಕೆ ಒದಗುವ ಸಾಮಗ್ರಿಗಳ ಖರೀದಿಗೆ ಸಹಾಯ	180.00	0	1500 ಫಲಾನುಭವಿಗಳು